**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 584/2024**

**ಚಾ.ಸಾಃ 2, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ತಿಮ್ಮಪ್ಪ ನಾಯ್ಕ |
| ತಂದೆಯ ಹೆಸರು | ಕೃಷ್ಣನಾಯ್ಕ |
| ವಯಸ್ಸು | 32 ವರ್ಷಗಳು |
| ಉದ್ಯೋಗ | ಅಂಗಡಿ ವ್ಯಾಪಾರ |
| ವಾಸ್ತವ್ಯ | ಇಡಗುಂಜಿ ಕ್ರಾಸ್, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 28-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಈಗ್ಗೆ ಒಂದು ವರ್ಷಗಳ ಹಿಂದೆ ಚಾಸಾ-1 ರವರ ಅಂಗಡಿಯಲ್ಲಿ 2 ಏರಗನ್‌ಗಳು ಕಳ್ಳತನ ಆಗಿದ್ದವು. ಅಂಗಡಿಯ ಪಕ್ಕದಲ್ಲಿ ಒಂದು ಟಿಪ್ಪರ್ ಮತ್ತು ಜೆಸಿಬಿ ಬ್ಯಾಟರಿ ಕಳ್ಳತನ ಆಗಿದ್ದು ಅಲ್ಲಿಗೆ ಪೋಲೀಸರು ಬಂದು ನೋಡಿ ಪರಿಶೀಲಿಸಿ ಪಂಚನಾಮೆ ಮಾಡಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಫೋಟೋ ನೋಡುತ್ತಿದ್ದು ನಿಪಿ-3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ನಾನು ಚಾಸಾ-1 ರವರ ಅಂಗಡಿಯ ಕಟ್ಟಡದ ಮಾಲೀಕರ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಅಂಗಡಿಯ ಹತ್ತಿರ ನಿಂತಿದ್ದಾಗ ಪೋಲೀಸರು ಕರೆದು ಪಂಚನಾಮೆಗೆ ಸಹಿ ಹಾಕುವಂತೆ ಕೇಳಿ ಹಾಕಿಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಪೋಲೀಸರು ಏನೆಲ್ಲ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಪೋಲೀಸರು ಫೋಟೋ ತೆಗೆದು ಸಹಿ ಹಾಕುವಂತೆ ಕೇಳಿದ್ದರಿಂದ ಸಹಿ ಹಾಕಿರುತ್ತೇನೆ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**